# ಹಡದವ್ವ

ಬೆಳಕು ಹರಿಯೋಕಿನ ಮೊದಲ
ಎದ್ದು ಸಂಸಾರದ ನೊಗ ಹಿಡಿದಾಕಿ
ಉರಿತಿರೋ ದೀಪಾ ಊದಿ
ಒಲಿ ಪುಟು ಮಾಡುವಾಕಿ
ಹೆಂಡಿ–ಕಸ ಬಳಿದು, ಕೊಟಗಿ ಸ್ವಚ್ಛ ಮಾಡಿ
ದನಕ್ಕ ಮೇವು ಹಾಕಿ, ಅಂಗಳ ಕಸ ಹುಡಗಿ
ಹೊಸ್ತಲಕ ಅರಿಶಿನ ಕುಂಕಮ ಹಚ್ಚುವಾಕಿ
ಬೀಡಿ ಸೇದಕೋತ ಕುಂತ ಗಂಡಗ
ಚಾ ಕಾಸಿ ತಂದಾಕಿ, ಬಿಸಿಲ ಬಿದ್ದದ ಏಳ
ಯಾಡ ಕೊಡಾ ನೀರ ತೊಗೊಂಡಬಾ
ಎಂದ ಮಗನಿಗಿ ಎಬಿಸಾಕಿ
ಜಳಕಾ ಮಾಡಿ ಮನಿ ದೇವ್ರಿಗೆ
ದೀಪಾ ಹಚ್ಚಿ
ಅಡುಗಿ ತಯಾರಿ ನಡೆಸುವಾಕಿ
ಪಟ ಪಟ ರೊಟ್ಟಿ ಬಡಕೋತ
ಜಳಕಾಯ್ತೇನು ಬರ್ರಿ ಬಿಸಿಬಿಸಿ
ರೊಟ್ಟಿ ತಿನ್ರಿ ಎಂದು ಕರೆವಾಕಿ
ಎತ್ತು ಬಿಟಕೊಂಡ ಹೊಲಕ ಹೊಂಟ
ಗಂಡಗ ನೀ ನಡಿ ಮುಂದ
ನಾ ಕೆಲಸಾ ಮುಗಿಸಿ ಬರ್ತೀನಿ
ಎಂದು ಕಳಿಸಾಕಿ
ಬುತ್ತಿಕಟಕೊಂಡ ಹೊಲಕ ಬಂದು
ನೆತ್ತಿಸುಡೋ ಬಿಸಿಲಾಗ
ಭೂತಾಯಿಯ ನಂಬಿ ಬೆವರಿಳಿಸುವಾಕಿ
ನೆತ್ತಿ ಸೂರ್ಯ ಕದಲಿದ್ದು ಕಂಡು
ಹೊತ್ತ ಹೇಳುವಾಕಿ
ಹೊತ್ತ ಮುಣಗಿ ಕತ್ತಲಾಗಿ
ದುಡಿದು ಮನಿಸೇರುವಾಕಿ
ಸೇರಿ ಮುಂದಿನ ಕೆಲಸಾ ನೋಡುವಾಕಿ
ಏನಂತ ಕರಿಲೇ ನಿನ್ನಾ
ನನ್ನ ಹಡದವ್ವಾ ಅನ್ನದಾತೆ ನೀನವ್ವ

**● ವಿನಾಯಕ ಸಿ. ಕೋಟ್ಯಾಳ**



# ಕರುಣೆ ಬೇಡೇವ

ಮುಂಗಾರು ಮುಗಿದಾವು ಹಿಂಗಾರು
ಕರೆದಾವು
ತಂಗಾಳಿಗೆ ಕಾಳು ಬೆರೆತಾವು। ಹಡೆದವ್ವ
ಬಿಳಿಜೋಳ ರಾಶಿ ಮಾಡೇವ॥

ಹೋದ ವರುಷದ ಪೈರಿಗೆ ಹುಲುಸಿಲ್ಲ
ಗೆಲುವಿಲ್ಲ
ಅರೆ ಹೊಟ್ಟೆ ಇದ್ದರೂ ದಿನವೆಲ್ಲ।
ಭೂತಾಯಿ
ಈ ವರ್ಷ ಕೈಯ ಬಿಡಲಿಲ್ಲ॥

ಬೆಳಗಾರೆ ನಾವೆದ್ದು ದೇವರ ನೆನದೇವ
ಒಡಲಲ್ಲಿ ಹಸಿರು ಉಸಿರಾಗಿ। ಬರುವಂತ
ಮಳೆರಾಯನ ಕರುಣೆ ಬೇಡೇವ॥

ಆಡಕಲ ಗಡಿಗ್ಯಾಗ ಹಿಡಿಜೋಳ ಇದ್ದರ
ದಾನ ಧರ್ಮವ ಮಾಡೇವ। ತಂಗೆವ್ವ
ಬಳಗಾನ ಕರಕೊಂಡು ಉಂಡೇವ॥

**● ಬಸವರಾಜ ಕನ್ನೂರ**